ಪ್ರ-330-14

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ, ಶ್ರೀ ಪುಟ್ಟಣ್ಣ ಹಾಗೂ ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ ಇವರುಗಳು ನಿಯಮ 330ರಡಿ ನೀಡಿರುವ ಸೂಚನಾ ಪತ್ರಕ್ಕೆ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಹೇಳಿಕೆ.

-- o --

**ವಿಷಯ**

ಮೆಟ್ರೋ 2ನೇ ಹಂತದ ಕಾಮಗಾರಿಯಲ್ಲಿ ಶಿವಾಜಿನಗರದಿಂದ ನಾಗವಾರದವರೆಗೆ ಅಂಡರ್ ಗ್ರೌಂಡ್ ಮಾರ್ಗ ನಿರ್ಮಾಣಕ್ಕಾಗಿ ಭೂಸ್ವಾಧೀನಗೊಂಡ ಸ್ಥಳದಲ್ಲಿ ಭೂಮಾಲೀಕರಿಂದ ದೀರ್ಘಕಾಲದ ಗುತ್ತಿಗೆ ಪಡೆದು, ನೊಂದಾಯಿತ ಒಪ್ಪಂದದ (ರಿಜಿಸ್ಟರ್ಡ್ ಡೀಡ್) ಮಾಡಿಕೊಂಡು ವ್ಯವಹಾರ ನಡೆಸುತ್ತಿರುವ ಗುತ್ತಿಗೆದಾರರಿಗೆ ಮಾನ್ಯ ಸರ್ವೋಚ್ಛ ನ್ಯಾಯಾಲಯ ಹಾಗೂ ಇತರೆ ಉಚ್ಛ ನ್ಯಾಯಾಲಯಗಳ ಆದೇಶವಿದ್ದರೂ ಗುತ್ತಿಗೆದಾರರಿಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಇವರು ಸೂಕ್ತ ಪರಿಹಾರ ನೀಡದೇ ಇರುವುದರಿಂದ ಉಂಟಾದ ಗಂಭೀರ ಸಮಸ್ಯೆ ಬಗ್ಗೆ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಗಮನ ಸೆಳೆಯ ಬಯಸುತ್ತೇವೆ.

**ಉತ್ತರ**

ಬೆಂಗಳೂರು ಮೆಟ್ರೋ ರೈಲು ಯೋಜನೆಗಾಗಿ ನಾಗವಾರ ಗ್ರಾಮದ ಸರ್ವೆ ನಂ: 135/1 ರಲ್ಲಿ 100.66 ಚ.ಮೀ. ಮತ್ತು ಸರ್ವೆ ನಂ: 135/2 ರಲ್ಲಿ 655.19 ಚ.ಮೀ., ವಿಸ್ತೀರ್ಣವನ್ನು ಭೂಸ್ವಾಧೀನಪಡಿಸಲು ಕೆಐಎಡಿ ಕಾಯ್ದೆ 1966ರ ವಿಧಿ 28(4)ರಡಿ ಅಂತಿಮ ಅಧಿಸೂಚನೆಯನ್ನು ದಿನಾಂಕ: 17.01.2019ರಂದು ಹೊರಡಿಸಲಾಗಿದೆ.

ಖಾತೆದಾರರ ಕಾಲಂನಲ್ಲಿ (1) ಶ್ರೀ ಆರ್. ಚಂದ್ರಶೇಖರ್ ಬಿನ್ ಕೃಷ್ಣಯ್ಯ ಮತ್ತು (2) ಸರಸ್ವತಿ ಕೋಂ ಕೆ. ಚಂದ್ರಶೇಖರ್ ಇವರುಗಳ ಹೆಸರನ್ನು ನಮೂದಿಸಲಾಗಿದ್ದು, ಅನುಭವದಾರರ ಕಾಲಂನಲ್ಲಿ ಇಂಡಿಯನ್ ಪೆಟ್ರೋಲ್ ಬಂಕ್ ಹೆಸರನ್ನು ನಮೂದಿಸಲಾಗಿದೆ.

ಈ ವಿಸ್ತೀರ್ಣಕ್ಕೆ ಸಂಬಂಧಿಸಿದಂತೆ ಬಿ.ಎಂ.ಆರ್.ಸಿ.ಎಲ್.ರವರು ದಿನಾಂಕ: 04.01.2020ರಂದು 655.19 ಚ.ಮೀ. ವಿಸ್ತೀರ್ಣಕ್ಕೆ ರೂ.10,71,05,091/-ಗಳಿಗೆ ಹಾಗೂ 100.66 ಚ.ಮೀ. ವಿಸ್ತೀರ್ಣಕ್ಕೆ ರೂ.1,47,14,417/-ಗಳ ಪರಿಷ್ಕೃತ ಪ್ಯಾಕೇಜ್ ಸಲ್ಲಿಸಿದ್ದು, ಪರಿಹಾರ ಪಾವತಿಸುವ ಕುರಿತು ದಿನಾಂಕ: 06.01.2020ರಂದು ಕಲಂ 29(2)ರನ್ವಯ ಖಾತೆದಾರರಿಗೆ ತಿಳುವಳಿಕೆ ಪತ್ರವನ್ನು ಜಾರಿ ಮಾಡಲಾಗಿರುತ್ತದೆ.

ನಾಗವಾರ ಗ್ರಾಮದ ಸರ್ವೆ ನಂ: 135/1 ರ 100.66 ಚ.ಮೀ. ವಿಸ್ತೀರ್ಣಕ್ಕೆ ರೂ.1,47,14,417/-ಗಳನ್ನು ಖಾತೆದಾರರಾದ ಶ್ರೀ ಆರ್. ಚಂದ್ರಶೇಖರ್ ಬಿನ್ ಕೃಷ್ಣಯ್ಯ ಇವರಿಗೆ ಪಾವತಿಸಲಾಗಿದೆ.

ನಾಗವಾರ ಗ್ರಾಮದ ಸರ್ವೆ ನಂ: 135/2 ರ 655.19 ಚ.ಮೀ. ವಿಸ್ತೀರ್ಣವನ್ನು ಶ್ರೀ ಬಾಲಾಜಿ ರಾವ್, ಇಂಡಿಯನ್ ಪೆಟ್ರೋಲ್ ಬಂಕ್ ಇವರು 25 ವರ್ಷಗಳ ಅವಧಿಗೆ ಗುತ್ತಿಗೆ ಪಡೆದಿದ್ದು, ಗುತ್ತಿಗೆ ಅವಧಿಯು ಮುಕ್ತಾಯಗೊಳ್ಳಲು ಇನ್ನೂ 9 ವರ್ಷ ಬಾಕಿ ಇರುತ್ತದೆ. ಸದರಿಯವರು ಸಮಾನ ಪರಿಹಾರ ನೀಡಬೇಕೆಂದು ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ದಾಖಲಿಸಿದ್ದ ರಿಟ್ ಅರ್ಜಿ ಸಂಖ್ಯೆ: 16258-259/2019ರಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ: 14.01.2020ರಂದು ನೀಡಿದ ತೀರ್ಪಿನಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿಯವರು ಕಾನೂನಿನಂತೆ ಪರಿಶೀಲಿಸಿ, ಭೂಪರಿಹಾರ ಮಾಡಲು ಕ್ರಮವಹಿಸಲು ಆದೇಶಿಸಿದೆ.

ಸದರಿ ಸ್ವತ್ತಿನ ಭೂಪರಿಹಾರದ ಕುರಿತು ತಕರಾರು ಇರುವ ಕಾರಣ ಮಾನ್ಯ ನ್ಯಾಯಾಲಯದ ಆದೇಶದ ಅನುಸಾರ ಕ್ರಮವಹಿಸಿ, ಸಾಮಾನ್ಯ ಐತೀರ್ಪು ರಚಿಸಿ, ಭೂಪರಿಹಾರದ ಮೊತ್ತವನ್ನು ಸಂಬಂಧಪಟ್ಟ ನ್ಯಾಯಾಲಯದಲ್ಲಿ ಠೇವಣಿ ಇಡಲು ಕ್ರಮವಹಿಸಲಾಗುತ್ತಿದೆ.

ಸಂಖ್ಯೆ: ಸಿಐ 44 ಐಎಪಿ(ಇ) 2020

(ಜಗದೀಶ ಶೆಟ್ಟರ್)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಸಾರ್ವಜನಿಕ ಉದ್ದಿಮೆ ಸಚಿವರು